
ಕರೆಯುತ್ತಿದ್ದವರು. ಹಣ್ಣು, ತರಕಾರಿ ಗಂಟುಗಳನ್ನು ಹೊತ್ತು ಧಾವಂತದಲ್ಲಿ ಓಡಾಡುತ್ತಿದ್ದವರು. ಬಿರು ಬಿಸಿಲಿನಲ್ಲೂ ಮುಖಕ್ಕೆ ಢಾಳಾಗಿ ಮೇಕಪ್ ಹಾಕಿಕೊಂಡು ಉಟ್ಟ ಸೀರೆಯನ್ನು ಸ್ವಲ್ಪವೇ ಮೇಲೆತ್ತಿ ಮೊಣಕಾಲುಗಳನ್ನು ತೋರಿಸುತ್ತಾ ಗಿರಾಕಿಗಳ ತಲಾಶ್‌ನಲ್ಲಿದ್ದ ನಡುವಯಸ್ಸಿನ ಮೂವರು ಹೆಂಗಸರು. ಅವರ ಪಕ್ಕ ಇದ್ದ ಇಬ್ಬರು ಹುಡುಗಿಯರು. ಅವರ ಹಿಂದೆ ಬಾಡಿಗಾರ್ಡ್‌ಗಳಂತೆ ನಿಂತಿದ್ದ ತಲೆಹಿಡುಕರು. ಕತ್ತಲ್ಲಿ ಸ್ಟೆಥಾಸ್ಕೋಪ್ ನೇತಾಡಿಸಿಕೊಂಡು ಸರಸರ ಓಡಾಡುತ್ತಿದ್ದ ಮೆಡಿಕೊಗಳು, ಮೆಟ್ರೊ ಸ್ಟೇಷನ್ನಿನ ಕಡೆ ಹೊರಟವರನ್ನು ನೋಡುತ್ತಾ ರಾಜೀವ ಕೆಲವು ನಿಮಿಷಗಳು ಸುಮ್ಮನೆ ನಿಂತಿದ್ದ. ಸಿಟಿ ಮಾರ್ಕೆಟ್ಟಿನ ಕಡೆ ತಲೆ ಹಾಕದೆ ಏಳೆಂಟು ವರ್ಷಗಳೇ ಆಗಿವೆ. ಫ್ಲೈ ಓವರ್ ಆದ ಮೇಲೆ ಮಾರ್ಕೆಟ್ಟಿನ ಖದರು ಬದಲಾಗಿದೆ ಅನ್ನಿಸಿತು.

ಧಾವಂತದಲ್ಲಿರುವವರಿಗೆ ದಾರಿ ಬಿಟ್ಟು ಪಕ್ಕಕ್ಕೆ ಸರಿಯುತ್ತಾ ಮಾರ್ಕೆಟ್ಟಿನ ಮುಂಭಾಗಕ್ಕೆ ಬಂದ. ಒಂದೆರಡು ನಿಮಿಷ ಅಲ್ಲಿ ನಿಂತು ಸುಗಂಧರಾಜ, ಮಲ್ಲಿಗೆ, ಸಂಪಿಗೆ ಹೂಗಳ ಪರಿಮಳದ ಗಾಳಿಯನ್ನು ಹೀರಿಕೊಂಡ. ಸೈಕಲ್ ಕ್ಯಾರಿಯರ್ ಮೇಲೆ ತಟ್ಟೆ ಆಕಾರ ಬುಟ್ಟಿಗಳಲ್ಲಿ ನಾನಾ ನಮೂನೆ ಹಣ್ಣುಗಳನ್ನು ಇಟ್ಟು ಮಾರುತ್ತಿದ್ದವರನ್ನು ನೋಡುತ್ತಿರುವಾಗ ರಾನಡೆ ಬಾಡಿ ಮಾರ್ಚರಿಯಲ್ಲಿರುವುದು ನೆನಪಾಯಿತು. ಇಷ್ಟೊತ್ತಿಗೆ ಅವನ ಕಡೆಯವರು ಬಂದು ಬಾಡಿ ತಗಂಡು ಹೋಗಿರಬಹುದು ಅನ್ನಿಸಿ ಅತ್ತ ನಡೆದ. ರಸ್ತೆಯ ಉದ್ದಕ್ಕೂ ರೋಗಿಗಳು, ಅವರ ಜತೆ ಬಂದವರು, ಊಟ, ತಿಂಡಿ, ಕಾಫಿ ತಂದವರು, ನೋಡಲು ಬಂದವರು ಹೋಗುತ್ತಾ, ಬರುತ್ತಾ ಇದ್ದರು. ಎಲ್ಲರೂ ಕೆಳ ಮಧ್ಯಮ ವರ್ಗದವರು. ಖಾಸಗಿ ಆಸ್ಪತ್ರೆಗಳಿಗೆ ಹೋಗಲಾಗದವರು. ಆಸ್ಪತ್ರೆ ಸುತ್ತ ಮೆಡಿಕಲ್ ಸ್ಟೋರುಗಳು, ಚಿಕಿತ್ಸೆಗೆ ಬೇಕಾದ ಉಪಕರಣಗಳನ್ನು ಮಾರುವ ಅಂಗಡಿಗಳು, ಟೀ, ಕಾಫಿ ಶಾಪ್‌ಗಳು ಬಂದಿವೆ ಅಂದುಕೊಳ್ಳುತ್ತಾ ಮಾರ್ಚರಿ ಬಳಿಗೆ ಬಂದ. ಬೀಗ ಹಾಕಿದ್ದನ್ನು ನೋಡಿ ಆತಂಕವಾಯಿತು. ಮಾರ್ಚರಿ ಹೊರಗೆ ಜನ ನಿಂತಿದ್ದರು. ಎಲ್ಲರ ಮುಖದಲ್ಲೂ ಏನೋ ಆತಂಕ. ಯಾರನ್ನು ಕೇಳುವುದೆಂದು ಗೊತ್ತಾಗದೆ ಸ್ವಲ್ಪ ಹೊತ್ತು ಸುಮ್ಮನೆ ನಿಂತಿದ್ದು ಸ್ಟೇಷನ್ನಿಗೆ ಫೋನ್ ಮಾಡಿದ.



'ಸರ್, ನಾನು ದೇವೇಂದ್ರಪ್ಪ ಡ್ಯೂಟಿಲಿರೋ ಎಸ್ಸೆಚ್‌ಓ. ಭಂಡಾರಿ ಸಾಹೇಬರು ನೀವು ಫೋನ್ ಮಾಡಬಹುದು ಅಂದಿದ್ದರು. ಅವರು ಬಂದೋಬಸ್ತಿಗೆ ಕಂಟೋನ್ಮೆಂಟ್ ಸ್ಟೇಷನ್ ಕಡೆ ಹೋಗಿದ್ದಾರೆ. ನಿಮ್ಮ ಹುಡುಗನ ಬಾಡಿ ಇನ್ನೂ ಮಾರ್ಚರಿಯಲ್ಲೇ ಇದೆ. ತಗಂಡು ಹೋಗೋಕೆ ಯಾರಾದರೂ ಬಂದಿದ್ದರೆ ಹೇಳಿ. ಅಲ್ಲಿ ಡ್ಯೂಟಿಯಲ್ಲಿರೋ ಪೀಸಿಗೆ ಫೋನ್ ಮಾಡ್ತೀನಿ. ಅವನು ಬಾಡಿ ಕೊಡಿಸ್ತಾನೆ...' ಎಂದು ದೇವೇಂದ್ರಪ್ಪ ಹೇಳಿದ ಮೇಲೆ ಬಾಡಿ ಮಾರ್ಚರಿಯಲ್ಲೇ ಇರುವುದು ಖಚಿತವಾಯಿತು.

ರಾಯಭಾಗದಿಂದ ಬರಬೇಕಿದ್ದವರು ಇನ್ನೂ ಯಾಕೆ ಬರಲಿಲ್ಲ? ಅವರಿಗೆ ಬಸ್ಸು ಸಿಕ್ಕಿತೋ ಇಲ್ಲವೋ. ಈಗ ಎಲ್ಲಿದ್ದಾರೋ ಕೇಳಬೇಕು ಅಂದು ಕೊಳ್ಳುತ್ತಿರುವಾಗ ಅವನ ಫೋನ್ ರಿಂಗಾಯಿತು. ಮತ್ತೆ ಅವನ ಚೀಫ್.